**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

## ಕ್ರಿ ಮೊ ಸಂಖ್ಯೆ 17/2024

ಪಿರ್ಯಾದಿ ಃ ರಾಜ್ಯದ ಪರವಾಗಿ ಬೀರೂರು ಪೊಲೀಸರು

- ವಿರುದ್ಧ -

ಆರೋಪಿ/ತರುಃ

1) ಕಮಲಮ್ಮ ಕೋಂ ಚಿಕ್ಕಹನುಮೇಗೌಡ, 57 ವರ್ಷ, ಗೃಹಿಣಿ, ವಾಸಃ ಪುಂಡನಹಳ್ಳಿ ಗ್ರಾಮ, ತರೀಕೆರೆ ತಾಲ್ಲೂಕು.
2) ಶೃತಿ ಕೋಂ ಲೋಕೇಶಪ್ಪ, 40 ವರ್ಷ, ಗೃಹಿಣಿ, ವಾಸಃ ದೊಡ್ಡಘಟ್ಟ ಗ್ರಾಮ, ತರೀಕೆರೆ ತಾಲ್ಲೂಕು.
3) ದೀಪು ಬಿನ್ ನರಸಿಂಹಮೂರ್ತಿ, 20 ವರ್ಷ, ವ್ಯವಸಾಯಗಾರರು, ವಾಸಃ ಎಂ.ಎಸ್.ಎಂ. ಗೋಡೌನ್, ಬೀರೂರು, ಕಡೂರು ತಾಲ್ಲೂಕು
4) ಚೇತನ್ ಬಿನ್ ಚಿಕ್ಕಹನುಮೇಗೌಡ, 30 ವರ್ಷ, ವ್ಯವಸಾಯಗಾರರು, ವಾಸಃ ಪುಂಡನಹಳ್ಳಿ ಗ್ರಾಮ, ತರೀಕೆರೆ ತಾಲ್ಲೂಕು.
5) ಅನಿಲ ಬಿನ್ ಮಲ್ಲೇಶಪ್ಪ, 22 ವರ್ಷ, ವ್ಯವಸಾಯಗಾರರು, ವಾಸಃ ಪುಂಡನಹಳ್ಳಿ ಗ್ರಾಮ, ತರೀಕೆರೆ ತಾಲ್ಲೂಕು.
6) ಮಲ್ಲೇಶಪ್ಪ ಬಿನ್ ಹನುಮಂತಪ್ಪ, 51 ವರ್ಷ, ವ್ಯವಸಾಯಗಾರರು, ವಾಸಃ ಪುಂಡನಹಳ್ಳಿ ಗ್ರಾಮ, ತರೀಕೆರೆ ತಾಲ್ಲೂಕು.
7) ಚಂದ್ರಮ್ಮ ಕೋಂ ಬಸವರಾಜಪ್ಪ, 65 ವರ್ಷ, ಗೃಹಿಣಿ, ವಾಸಃ ಪುಂಡನಹಳ್ಳಿ ಗ್ರಾಮ, ತರೀಕೆರೆ ತಾಲ್ಲೂಕು.

---

**-ಃದೋಷಾರೋಪಣೆಃ-**

ಶ್ರೀಮತಿ ಉರ್ಮಿಳ.ವಿ., ಬಿ.ಎ.ಎಲ್, ಎಲ್.ಎಲ್.ಬಿ., 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ ಆದ ನಾನು ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆಗಳೇನೆಂದರೆಃ-

ದಿನಾಂಕ 12.03.2022 ರಂದು ಮಧ್ಯಾಹ್ನ 03.30 ಗಂಟೆ ಸಮಯದಲ್ಲಿ ಬೀರೂರು ಪೊಲೀಸ್ ಠಾಣಾ ಸರಹದ್ದಿನ ಪುಂಡನಹಳ್ಳಿ ಗ್ರಾಮದಲ್ಲಿ ಚಾಸಾ-2 ರತ್ನಮ್ಮರವರು ತಮ್ಮ ಮನೆಯ ಮುಂದೆ ಕುಳಿತಿದ್ದಾಗ 7 ನೇ ಆರೋಪಿಯಾದ ನೀವು ಚಾಸಾ-18 ಮಧುಸೂದನ್ ರವರನ್ನು ಉದ್ದೇಶಿಸಿ ಬೈಯ್ಯುತ್ತಿದ್ದಾಗ, ಚಾಸಾ-2 ರವರು 7 ನೇ ಆರೋಪಿಯಾದ ನಿಮಗೆ ಏಕೆ ಬೈಯ್ಯುತ್ತಿದ್ದೀಯಾ ಎಂದು ಕೇಳಿದಾಗ, ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು ಅಕ್ರಮ ಕೂಟದ ಸದಸ್ಯರಾಗಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 143 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು ದೊಂಬಿ ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 147 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮೂರನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು 1 ನೇ ಆರೋಪಿಯಾದ ನೀವು ಚಾಸಾ-1 ಪೂಜಾರವರನ್ನು ಹಿಡಿದು ಎಳೆದಾಡಿ ಮೈಕೈಗೆ ಹೊಡೆದು, 2, 3 ನೇ ಆರೋಪಿತರಾದ ನೀವು ಚಾಸಾ-1 ರವರನ್ನು ಹಿಡಿದು ಎಳೆದಾಡಿ ಕೈಯಿಂದ ದೂಡಿ ಎದೆಯ ಭಾಗಕ್ಕೆ ಕೈಯಿಂದ ಹೊಡೆದು, 4 ನೇ ಆರೋಪಿಯಾದ ನೀವು ಚಾಸಾ-1 ಪೂಜಾರವರನ್ನು ಹಿಡಿದು ಎಳೆದಾಡಿ ಕೈಯಿಂದ ಹೊಡೆದು, ಚಾಸಾ-1 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 323 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನಾಲ್ಕನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು 3 ಮತ್ತು 4 ನೇ ಆರೋಪಿತರಾದ ನೀವು ಚಾಸಾ-1 ರವರನ್ನು ಹಿಡಿದು ಎಳೆದಾಡಿ ಚಾಸಾ-1 ರವರ ಮಾನಕ್ಕೆ ಧಕ್ಕೆಯನ್ನುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 354 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಐದನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು, 3 ನೇ ಆರೋಪಿಯಾದ ನೀವು ಬಿಡಿಸಲು ಬಂದ ಚಾಸಾ-4 ಗೋಪಿನಾಥ, ಚಾಸಾ-5 ಯೋಗೀಶ, ಚಾಸಾ-6 ಲಕ್ಷ್ಮೀಶ, ಚಾಸಾ-7 ರವರಿಗೆ ದೊಣ್ಣೆಯಿಂದ ಮೈಕೈಗೆ ಹೊಡೆದು, 4 ನೇ ಆರೋಪಿಯಾದ ನೀವು ಚಾಸಾ-3 ರಿಂದ 7 ರವರಿಗೆ ಕಲ್ಲಿನಿಂದ ಮೈಕೈಗೆ ಹೊಡೆದು, 5

ಮತ್ತು 6 ನೇ ಆರೋಪಿತರಾದ ನೀವು ಚಾಸಾ-3 ರಿಂದ 7 ರವರಿಗೆ ದೊಣ್ಣೆಯಿಂದ ಮೈಕೈಗೆ ಹೊಡೆದು, ಚಾಸಾ-3 ರಿಂದ 7 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 324 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಕೊನೆಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು, ಚಾಸಾ-2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 504 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪದ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ ಃ 16.03.2026

ಸಹಿ

**(ಉರ್ಮಿಳ.ವಿ)**
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.